ಆ) ಸಂತ್ರಸ್ಥರಿಗೆ ಕಟ್ಟಲು ಯಾವುದಾದರೂ ಯೋಜನೆಯನ್ನು ರೂಪಿಸಿರುವರೇ ಅಥವಾ ಯಾವುದೇ ಸಂಘ ಸಂಸ್ಥೆಗಳು ಮನೆ ಕಟ್ಟಿಸಿಕೊಡಲು ಮುಂದೆ ಬಂದಿವೆಯೇ;

ಇ) ಹಾಗಿದ್ದಲ್ಲಿ, ಯಾವಾಗ ಸಂತ್ರಸ್ಥರಿಗೆ ಮನೆ ನಿರ್ಮಿಸಿ ಕೊಡಲಾಗುವುದು?

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಕುಂದಗೋಳ ತಾಲ್ಲೂಕಿನ ಮುಳ್ಳಳ್ಳಿ ಗ್ರಾಮವನ್ನು ಪೂರ್ಣವಾಗಿ ಸ್ಥಳಾಂತರಿಸಲು ಕ್ರಮವಹಿಸಲಾಗುತ್ತಿದೆ. ಈಗಾಗಲೇ 16–ಎ–10 ಗುಂಟೆ ಜಮೀನು ಖರೀದಿಸಲಾಗಿದೆ. ಇನ್ನು 15 ಎ 25 ಗುಂಟೆ ಜಮೀನು ಭೂಸ್ವಾಧೀನ ಪಡಿಸಿಕೊಳ್ಳಲಾಗುತ್ತಿದ್ದು ಭೂ ಸ್ವಾಧೀನ 4(1)ರನ್ವಯ ಅಧಿಸೂಚನೆ ಹೊರಡಿಸಿದೆ. ಗ್ರಾಮ ಸ್ಥಳಾಂತರ ಕಾರ್ಯವನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸುವ ಗುರಿ ಹೊಂದಿದೆ.

ಆ) ಸಂತ್ರಸ್ಥರಿಗೆ ಮನೆ ಕಟ್ಟಿ ಕೊಡಲು ಖರೀದಿಯಾದ ಜಮೀನಿನಲ್ಲಿ ಬಡವಣೆ ಅಭಿವೃದ್ಧಿ ಕೆಸ ಪ್ರಗತಿಯಲ್ಲಿದೆ ಕಾಮಗಾರಿ ಪೂರ್ಣಗೊಂಡೊಡನೆ ಮನೆ ಕಟ್ಟಲು ಕ್ರಮ ಕೈಗೊಳ್ಳಲಾಗುವುದು.

ಇ) 6 ತಿಂಗಳು ಒಳಗಾಗಿ ಮನೆ ನಿರ್ಮಿಸಿಕೊಡುವ ಗುರಿ ಹೊಂದಲಾಗಿದೆ.

ಮಿನಿ ವಿಧಾನ ಸೌಧಗಳು

80 (538) ಶ್ರೀ ದಿನಕರ ಕೇಶವ ಶೆಟ್ಟಿ (ಕುಮಟ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಕುಮಟ ಮತ್ತು ಹೊನ್ನಾವರ ತಾಲ್ಲೂಕುಗಳಲ್ಲಿ ಮಿನಿ ವಿಧಾನಸೌಧ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ; ಮೇಲ್ಕಂಡ ಮಿನಿವಿಧಾನ ಸೌಧವನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಬಂದಿದ್ದಲ್ಲಿ ಮಿನಿವಿಧಾನಸೌಧದ ನಿರ್ಮಾಣಕ್ಕೆ ಸ್ಥಳ ಗುರುತಿಸಲಾಗಿದೆಯೇ;

ಈ) ಗುರುತಿಸಿದ್ದಲ್ಲಿ, ಕಟ್ಟಡದ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ಹಾಗೂ ನಿಗದಿ ಪಡಿಸಿರುವ ಅನುದಾನದ ಮೊತ್ತ ಎಷ್ಟು (ವಿವರಗಳನ್ನು ನೀಡುವುದು)?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಬಂದಿದೆ.

ಆ) ಅನುದಾನ ಲಭ್ಯತೆಯನ್ನು ಅನುಸರಿಸಿ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಇ) ಕುಮಟ ಮತ್ತು ಹೊನ್ನಾವರ ತಾಲ್ಲೂಕುಗಳಲ್ಲಿ ಮಿನಿ ವಿಧಾನಸೌಧ ಕಟ್ಟಲು ಸ್ಥಳ ಇರುವುದಿಲ್ಲ. ಆದುದರಿಂದ ಈಗಿರುವ ತಹಶೀಲ್ದಾರರ ಕಾರ್ಯಾಲಯದ ಸ್ಥಳದಲ್ಲಿ ಮಿನಿ ವಿಧಾನಸೌಧ ನಿರ್ಮಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಈ) ಅನುದಾನದ ಲಭ್ಯತೆಯನ್ನು ಆಧರಿಸಿ ಹಂತಹಂತವಾಗಿ ಮಿನಿವಿಧಾನ ಸೌಧದ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಜಿಲ್ಲಾ ಖಜಾನೆಗಳಲ್ಲಿ ಪಿಂಚಣಿ ಪಾವತಿಯಾಗದಿರುವ ಬಗ್ಗೆ

84 (1052) ಶ್ರೀ ಸಿ.ಬಿ.ಕೃಷ್ಣ ಬೈರೇಗೌಡ (ಬ್ಯಾಟರಾಯನಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ತಹಶೀಲ್ದಾರರ ಕಛೇರಿಯಿಂದ ಮಂಜೂರಾದ ಸಂಧ್ಯಾ ಸುರಕ್ಷಾ/ವೃದ್ಧಾಪ್ಯ ವಿಧವಾ ಮತ್ತು ಅಂಗವಿಕಲ ಪಿಂಚಣಿಯೂ ರಾಜ್ಯದ ಜಿಲ್ಲಾ ಖಜಾನೆಗಳಲ್ಲಿ ಪಾವತಿ ಆಗದೇ ಬಾಕಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಜಿಲ್ಲಾ ಖಾನೆಗಳಲ್ಲಿ ಸಂಧ್ಯಾ ಸುರಕ್ಷಾ/ವೃದ್ಧಾಪ್ಯ, ವಿಧವಾ ಮತ್ತು ಅಂಗವಿಕಲ ಪಿಂಚಣಿ ಪಾವತಿ ಆಗದೇ ಬಾಕಿ ಉಳಿದಿರುವ ಪ್ರಕರಣಗಳೆಷ್ಟು;

ಇ) ಪಿಂಚಣಿ ಹಣ ಪಾವತಿ ಬಾಕಿಯಿರಿಸಲು ಹಣಕಾಸು ಮುಗ್ಗಟ್ಟು ಕಾರಣವೇ; ಮಂಜೂರಾತಿಗಾಗಿ ಪಿಂಚಣಿ ನಿರೀಕ್ಷೆಯಲ್ಲಿರುವ ನೊಂದವರಿಗೆ ಎಷ್ಟು ದಿನಗಳಲ್ಲಿ ಪಿಂಚಣಿ ಬಾಕಿ ಹಣವನ್ನು ನೀಡಲಾಗುವುದು;